ಓ.ಎಸ್.151/2021 ಪಿ.ಡಬ್ಲು-1
*ಗದ್ದೆಮ್ಮ ಗಂಡ ಸಾಬಣ್ಣ*

ದಿ.20-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎನ್.ಎಲ್.ಹೆಚ್ ವಕೀಲರಿಂದ:-**

ನಮ್ಮ ತಂದೆಯ ಹೆಸರು ತಿಮ್ಮಣ್ಣ. ನಮ್ಮ ತಾತನ ಹೆಸರು ಕುಪ್ಪಯ್ಯ. ನಮಗೆ ಅಡ್ಡಹೆಸರು ಬೆಳಗಂಟಿ ಎಂದು ಕರೆಯುತ್ತಾರೆ. ನಮ್ಮ ತವರು ಮನೆಯಲ್ಲಿ ಗುಡಿಹಿಂದಲವರ ಎಂದು ಕರೆಯುತ್ತಾರೆ. ಮೊದಲು ನಮ್ಮ ತವರು ಮನೆಯ ಅಡ್ಡಹೆಸರು ತೆಲಗರು ಎಂದು ಕರೆಯುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡಾಗ ನಾನು 2 ವರ್ಷದವಳಿದ್ದೆ. ನನಗೆ ಅಂದಾಜು 55 ವರ್ಷ ವಯಸ್ಸು ಇರುತ್ತದೆ. ಸರ್ವೆ ನಂ.64 ಒಟ್ಟು ವಿಸ್ತೀರ್ಣ 9 ಎಕರೆ ಚಿಲ್ಲರೆ ಇರುತ್ತದೆ. ಸರ್ವೆ ನಂ.64 ಒಟ್ಟು ವಿಸ್ತೀರ್ಣ 19 ಎಕರೆ 03 ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.64 ಎರಡು ಪಟ್ಟಿ ಇದ್ದು ಅದರಲ್ಲಿ ಒಂದು ಪಟ್ಟಿ 9 ಎಕರೆ 21 ಗುಂಟೆ ಮತ್ತು ಇನ್ನೊಂದು ಪಟ್ಟಿ 9 ಎಕರೆ 22 ಗುಂಟೆ ಇದೆ ಎಂದರೆ ಸರಿ. ನಮ್ಮ ತಂದೆಯ ಮರಣದ ನಂತರ 9 ಎಕರೆ ಚಿಕ್ಕರೆ ಹೊಲ ನಮ್ಮ ತಾಯಿ ದುರಗಮ್ಮನ ಹೆಸರಿಗೆ ಆಗಿದೆ ಎಂದರೆ ಸರಿ. ನಮ್ಮ ತಾಯಿಯ ಹೆಸರಿಗೆ ಎಷ್ಟು ವರ್ಷದ ಹಿಂದೆ ಈ ಜಮೀನು ಆಗಿದೆ ಎಂದು ನನಗೆ ಗೊತ್ತಿಲ್ಲ.

2. ನಮ್ಮ ತಾಯಿ ದುರಗಮ್ಮ ಪ್ರತಿವಾದಿಯ ಗಂಡ ದೇವಪ್ಪ ದರೋಜಿಯವರಿಗೆ ಖರೀದಿ ಪತ್ರದ ಮೂಲಕ 4 ಎಕರೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. ನಮ್ಮ ತಾಯಿ 4 ಎಕರೆ ಮಾರಾಟ ಮಾಡಿದ್ದು ನನಗೆ ನೆನಪಿರುತ್ತದೆ. ಖರೀದಿ ಪತ್ರದ ಸಂಖ್ಯೆ 353/1974-1975 ರಲ್ಲಿ 4 ಎಕರೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.